# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| 1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1079 |
| 2. ಸದಸ್ಯರ ಹೆಸರು | ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3. ಉತ್ತರಿಸುವ ದಿನಾಂಕ | 14-12-2023 |
| 4. ಉತ್ತರಿಸುವ ಸಚಿವರು | ಮಾನ್ಯ ಮುಖ್ಯಮಂತ್ರಿಗಳು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಲೋಕಾಯಕ್ತಕ್ಕೆ ಸಾರ್ವಜನಿಕರು ಸರ್ಕಾರಿ ನೌಕರರು ಹಾಗೂ ಅಧಿಕಾರಿಗಳ ಮೇಲೆ ದೂರು ಸಲ್ಲಿಸಲು ಇರುವ ನಿಯಮಗಳೇನು; ಸಾರ್ವಜನಿಕರು ದೂರನ್ನು ದಾಖಲು ಮಾಡಬೇಕಾದರೆ ಹಲವಾರು ನಿಯಮಗಳನ್ನು ರೂಪಿಸಿರುವುದು ನಿಜವೇ; | • **ಕರ್ನಾಟಕ ಲೋಕಾಯುಕ್ತ ಸಂಸ್ಥೆಯಲ್ಲಿ ಸರ್ಕಾರಿ ನೌಕರರು ಹಾಗೂ ಅಧಿಕಾರಿಗಳ ಮೇಲೆ ದೂರು ದಾಖಲಿಸಲು ಇರುವ ನಿಯಮಗಳು:**<br><br>1. ಕರ್ನಾಟಕ ಲೋಕಾಯುಕ್ತ ಕಾಯ್ದೆ 1984<br>2. ಕರ್ನಾಟಕ ಲೋಕಾಯುಕ್ತ ನಿಯಮಾವಳಿಗಳು 1985.<br><br>• **ಸಾರ್ವಜನಿಕರು ದೂರು ದಾಖಲಿಸಲು ಅನ್ವಯಿಸುವ ಮೇಲ್ಕಂಡ ಕಾಯ್ದೆ ಹಾಗೂ ನಿಯಮಗಳಲ್ಲಿನ ಉಪಬಂಧಗಳ ಉದ್ಧೃತ ಭಾಗ ಕೆಳಕಂಡಂತಿರುತ್ತದೆ.**<br><br>1. ಕರ್ನಾಟಕ ಲೋಕಾಯುಕ್ತ, ಕಾಯ್ದೆ 1984 ಕಲಂ 9(2) ರಲ್ಲಿ ಉಪಬಂಧಿಸಿರುವುದನ್ನು ಈ ಕೆಳಕಂಡಂತೆ ಯಥಾವತ್ತಾಗಿ ಓದಬಹುದಾಗಿರುತ್ತದೆ:-<br><br>**ನಿಯಮ-9:** ಫಿರ್ಯಾದುಗಳಿಗೆ ಮತ್ತು ತನಿಖೆಗೆ ಸಂಬಂಧಿಸಿದ ಉಪಬಂಧಗಳು.- (1) ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ಯಾವೊಬ್ಬ ವ್ಯಕ್ತಿಯು, ಈ ಅಧಿನಿಯಮದ ಮೇರೆಗೆ ಲೋಕಾಯುಕ್ತ ಅಥವಾ ಉಪಲೋಕಾಯುಕ್ತರಿಗೆ ಫಿರ್ಯಾದು ನೀಡಬಹುದು. |

| | | |
|---|---|---|
| | | **ನಿಯಮ 9(2):** ಪ್ರತಿಯೊಂದು ಫಿರ್ಯಾದನ್ನು, ನಿಗದಿಪಡಿಸಿರುವ ನಮೂನೆಯಲ್ಲಿ ಮತ್ತು ಅಫಿಡವಿಟ್ಟಿನ ಸಹಿತ ವಿವರಣೆಯ ರೂಪದಲ್ಲಿ ಸಲ್ಲಿಸಬಹುದು<br><br>**2. ಕರ್ನಾಟಕ ಲೋಕಾಯುಕ್ತ ನಿಯಮಗಳು 1985ರ ನಿಯಮ 4ನ್ನು ಈ ಕೆಳಕಂಡಂತೆ ಯಥಾವತ್ತಾಗಿ ಓದಬಹುದಾಗಿರುತ್ತದೆ:-**<br><br>**ನಿಯಮ-4:**<br><br>1. ಫಿರ್ಯಾದಿ ಪ್ರತಿಯೊಂದು ದೂರನ್ನು ದಾಖಲಿಸುವಾಗ ನಮೂನೆ-1 ರಲ್ಲಿ ಫಿರ್ಯಾದಿಯ ಸಹಿಯೊಂದಿಗೆ ಹಾಗೂ ತನ್ನ ಅಫಿಡೆವಿಟ್‌ನೊಂದಿಗೆ ನಮೂನೆ-2ರಲ್ಲಿ ಯಾವುದೇ ಪ್ರಥಮ ದರ್ಜೆ ನ್ಯಾಯಾಧೀಶರ, ಸಾರ್ವಜನಿಕ ದಸ್ತಾವೇಜು ಪ್ರಮಾಣಾಧಿಕಾರಿಗಳ ಪ್ರಮಾಣಪತ್ರ, ಆಯುಕ್ತರ ಅಥವಾ ಪ್ರಮಾಣವಚನವನ್ನು ಬೋಧಿಸಲು ಅಧಿಕೃತಗೊಳಿಸಿರುವ ಯಾವುದೇ ಪತ್ರಾಂಕಿತ ಅಧಿಕಾರಿಯ ಎದುರು ಪ್ರಮಾಣೀಕರಿಸಿರುವ ಶಪಥಪತ್ರವನ್ನು ಅದಕ್ಕೆ ಪೂರಕವಾಗಿ ಸಲ್ಲಿಸತಕ್ಕದ್ದು,<br>2. ದೂರನ್ನು ಫಿರ್ಯಾದಿಯು ಸ್ವತಃ ಸಲ್ಲಿಸಬಹುದು ಅಥವಾ ನಿಬಂಧಕರಿಗೆ ನೋಂದಾಯಿತ ಅಂಚೆಯ ಮುಖಾಂತರ ಸಲ್ಲಿಸಬಹುದು. ಅಂತಹ ದೂರನ್ನು ಯಾವ ಸರ್ಕಾರಿ ನೌಕರನ ವಿರುದ್ಧವಾಗಿ ದಾಖಲಿಸಲಾಗಿರುತ್ತದೋ ಆ ವ್ಯಕ್ತಿಯ ಹೆಸರನ್ನು ಮತ್ತು ಪದನಾಮವನ್ನು ಸ್ಪಷ್ಟಪಡಿಸಿ ನಿಬಂಧಕರು ಅಂತಹ ದೂರನ್ನು ಅಂಗೀಕರಿಸತಕ್ಕದ್ದು. |
| (ಆ) | ಸಾರ್ವಜನಿಕರು ದೂರನ್ನು ದಾಖಲು ಮಾಡಬೇಕಾದರೆ, ಅವರ ಆಧಾರ ಕಾರ್ಡ್, ಅಫಿಡೆವಿಟ್, ಮೊಬೈಲ್ ಸಂಖ್ಯೆ ಹಾಗೂ ಇನ್ನಿತರ ದಾಖಲೆಗಳನ್ನು ಕಡ್ಡಾಯವಾಗಿ ಪಡೆಯುತ್ತಿರುವ ಉದ್ದೇಶವಾದರು ಏನು; | ಕರ್ನಾಟಕ ಲೋಕಾಯುಕ್ತ ಸಂಸ್ಥೆಯಲ್ಲಿ ಸಾರ್ವಜನಿಕರು ದೂರನ್ನು ದಾಖಲು ಮಾಡಬೇಕಾದರೆ. ಅವರ ಆಧಾರ್ ಕಾರ್ಡ್ ಮತ್ತು ಮೊಬೈಲ್ ಸಂಖ್ಯೆ ಕಡ್ಡಾಯವಾಗಿರುವುದಿಲ್ಲ.<br><br>ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರಡಿಯಲ್ಲಿ ದೂರು ಸಲ್ಲಿಸಬೇಕಾದಲ್ಲಿ, ಕರ್ನಾಟಕ ಲೋಕಾಯುಕ್ತ ನಿಯಮಗಳು 1985ರ ನಿಯಮ 4ರಲ್ಲಿ ಉಪಬಂಧಿಸಿರುವಂತೆ ನಿಗಧಿತ ನಮೂನೆ-1ರಲ್ಲಿ ದೂರನ್ನು ಹಾಗೂ ನಮೂನೆ-2ರಂತೆ ಅಫಿಡವಿಟ್ ಸಲ್ಲಿಸಬೇಕಾಗಿರುತ್ತದೆ. |
| (ಇ) | ದೂರನ್ನು ಸಲ್ಲಿಸಲು ಇಷ್ಟೊಂದು | |

| | | |
|---|---|---|
| | ನಿಯಮಗಳನ್ನು ಪಾಲಿಸಲು ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಹಾಗೂ ಅವರ ಮಾಹಿತಿಯನ್ನು ಸಂಬಂಧಪಟ್ಟವರಿಗೆ ನೀಡಿದರೆ, ನಮಗೆ ತೊಂದರೆಯಾಗುವುದೆಂದು ಭಾವಿಸಿ ದೂರನ್ನು ದಾಖಲೆ ಮಾಡಲು ಹಿಂದೇಟು ಹಾಕುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಇಲ್ಲ. |
| (ಈ) | ಈ ನಿಯಮಗಳನ್ನು ಸಡಿಲಗೊಳಿಸಿ, ಈ ಹಿಂದೆ ಇದ್ದಂತ ನಿಯಮದಂತೆ, ದೂರನ್ನು ಸ್ವೀಕರಿಸಲು ಸರ್ಕಾರ ಆಲೋಚಿಸಿದೆಯೇ? | ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಸೆಕ್ಷನ್ 9 ರನ್ವಯ, ಸಾರ್ವಜನಿಕರು ದೂರು ಸಲ್ಲಿಸಲು ಕರ್ನಾಟಕ ಲೋಕಾಯುಕ್ತ ನಿಯಮಗಳು 1985ರಲ್ಲಿ ನಿಗದಿಪಡಿಸಿರುವ ನಮೂನೆ/ ಅಫಿಡವಿಟ್‌ಗಳನ್ನು ಮಾತ್ರ ಸಲ್ಲಿಸಬೇಕಾಗಿರುತ್ತದೆ. |

ಸಂಖ್ಯೆ: ಸಿಆಸುಇ 227 ಸೇಲೋಯು 2023

(ಸಿದ್ದರಾಮಯ್ಯ)
ಮುಖ್ಯಮಂತ್ರಿ.